ಅಧ್ಯಕ್ಷರು : ಶೂನ್ಯ ವೇಳೆಯದ್ದು ಚರ್ಚೆ ಆಯಿತು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಮತ್ತೆ ನಾಳೆ ಅವಕಾಶ ಕೊಡುತ್ತೇನೆ ಎಂದು ಏಕೆ ಹೇಳಿದಿರಿ?

ಅಧ್ಯಕ್ಷರು : ಮುಗಿಯಬೇಕಲ್ಲ? ಮುಂದಿನದು ಶ್ರೀ ವೆಂಕಟರಾವ್ ನಾಡಗೌಡ ಅವರು ಹಾಜರಿಲ್ಲ. ಶ್ರೀ ಎನ್. ಸಂಪಂಗಿ ಅವರೂ ಹಾಜರಿಲ್ಲ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಪ್ರಸ್ತಾಪ ಮಾಡಿ ಆಗಿದೆ.

ಅಧ್ಯಕ್ಷರು : ಆಯಿತು, Statement ಮಾಡಿ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಂಡಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಕನಕನವಾಡಿ ಗ್ರಾಮದಲ್ಲಿ ಸವರ್ಣೀಯರಿಂದ ದಲಿತರ ಮೇಲೆ ದೌರ್ಜನ್ಯ ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಸಬನಹಳ್ಳಿ ಗ್ರಾಮದಲ್ಲಿ ದಲಿತರ ಮೇಲೆ ದೌರ್ಜನ್ಯ, ಮಳವಳ್ಳಿ ತಾಲ್ಲೂಕಿನಲ್ಲಿ ಕಿರುಗಾವಲು ಗ್ರಾಮದಲ್ಲಿ ಆದಂತಹ ದೌರ್ಜನ್ಯ, ಮದ್ದೂರು ತಾಲ್ಲೂಕಿನ ಬುಜುವಹಳ್ಳಿ ಗ್ರಾಮಗಳಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದಿರತಕ್ಕದ್ದು.

ಅಧ್ಯಕ್ಷರು : ನೀವು ಪ್ರಸ್ತಾಪ ಮಾಡಿದ್ದೀರಿ ಅಷ್ಟೆ. ಪ್ರಸ್ತಾಪ ಮಾಡಿದ್ದನ್ನೇ ಮತ್ತೆ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಈಗ ಮಾನ್ಯ ಗೃಹ ಸಚಿವರು Statement ಮಾಡುತ್ತಾರೆ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಸ್ಪಷ್ಟವಾಗಿ ವಿಚಾರ ಗಳನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಇದು ದಲಿತರ ದೌರ್ಜನ್ಯದ ವಿಚಾರ, ದಲಿತರ ರಕ್ಷಣೆ ವಿಚಾರ.

ಅಧ್ಯಕ್ಷರು : ತಾವು ಇಷ್ಟವಿದ್ದರೆ Statement ಕೇಳಿ. ಇಲ್ಲದಿದ್ದರೆ ನಾನು ಮುಂದೆ ಹೋಗುತ್ತೇನೆ. ನೀವು ಹೇಳಿದ ಹಾಗೆ ಸದನ ನಡೆಸುವು ದಕ್ಕಾಗುವುದಿಲ್ಲ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ : ಇಡೀ ಜಿಲ್ಲೆಯಲ್ಲಿ ದಲಿತರ ಮೇಲೆ ಆಗತಕ್ಕಂಥ ದೌರ್ಜನ್ಯದ ಬಗ್ಗೆ ಹೇಳುತ್ತಿದ್ದೇನೆ. ಆ ವಿಷಯವನ್ನು ಮಾತ ನಾಡಲು ಅವಕಾಶ ಮಾಡಿಕೊಡದಿದ್ದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ನೋಡಿ. ನಿಮಗೆ raise ಮಾಡಲು ಅವಕಾಶ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ನಿರೀಕ್ಷೆ ಅಷ್ಟೆ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಇಂತಹ ವಿಚಾರಗಳಲ್ಲಿ ಮಧ್ಯ ಪ್ರವೇಶ ಮಾಡಬೇಕು. ಸರ್ಕಾರದಿಂದ ಸಂರಕ್ಷಣೆ ಬೇಕು.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನೋಡಿ, ಉತ್ತರ ಕೊಡುತ್ತಾರೆ. statement ಕೊಡುತ್ತಾರೆಂದು ನಿನ್ನೆಯೇ ಹೇಳಿದ್ದೇನೆ. ಮತ್ತೆ ಪುನಃ ಅದನ್ನೇ raise ಮಾಡಿದರೆ ಹೇಗೆ? ಮೊದಲು ಸಚಿವರು ಹೇಳುವುದನ್ನು ಕೇಳಿ.

5. ಮಾನ್ಯ ಗೃಹ ಸಚಿವರಿಂದ ಹೇಳಿಕೆ :

ವಿಷಯ : ಮಂಡ್ಯ ಜಿಲ್ಲೆಯಲ್ಲಿ ದಲಿತರ ಮೇಲೆ ಹಲ್ಲೆ ನಡೆದಿರುವ ಬಗ್ಗೆ.

ಶ್ರೀ ಆರ್. ಅಶೋಕ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ನರೇಂದ್ರಸ್ವಾಮಿಯವರು ಮಂಡ್ಯ ಜಿಲ್ಲೆಯಲ್ಲಿ ದಲಿತರ ಮೇಲೆ ಏನು ಹಲ್ಲೆಗಳು ನಡೆಯುತ್ತಿವೆ, ಕನಕಮರಡಿ, ಕಸುವಿನಹಳ್ಳಿ, ಕಿರುಗಾವಲು 3 ಘಟನೆಗಳು ಏನಾಗಿವೆ, ಈ ತರಹದ ಕೆಲವು ಗ್ರಾಮಗಳಲ್ಲಿ ದಲಿತರ ಮೇಲೆ ಏನು ಗಲಾಟೆಗಳು ನಡೆಯುತ್ತಿವೆ, ಅದರ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಯಾವುದೇ ಘಟನೆ ನಡೆದ ತಕ್ಷಣ ನಮ್ಮ ಸ್ಥಳೀಯ ಪೊಲೀಸರು ಮತ್ತು ತಹಶೀಲ್ದಾರರು, Assistant Commissioner, SP, DC ಯವರು ಸ್ಥಳಕ್ಕೆ ಭೇಟಿ ಮಾಡಿ ಯಾರು ಆರೋಪಿಗಳಿದ್ದಾರೆ ಅವರನ್ನೆಲ್ಲಾ ಈಗಾಗಲೇ ಬಂಧಿಸಿದ್ದಾರೆ. ಹಾಗೂ ಶಾಸಕರ ನೇತೃತ್ವದಲ್ಲಿ ಜನಪ್ರತಿನಿಧಿಗಳ ಸಭೆ ಮಾಡಿ, ಸ್ಥಳೀಯ ಮುಖಂಡರ ಸಭೆ ಮಾಡಿ ಶಾಂತಿ ಸಭೆಗಳನ್ನು ಮಾಡಿದ್ದಾರೆ. ಈ ರೀತಿ ಯಾವುದೇ ಭಯದ ವಾತಾವರಣ ಮೂಡದ ಹಾಗೆ ದಲಿತರು ಯಾವುದೇ ಸಂದರ್ಭದಲ್ಲೂ police station ಗೆ ಬಂದು complaint ಕೊಡುವ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದೇವೆ. ಈಗಾಗಲೇ 7 ಬಾರಿ ಸಭೆ ನಡೆಸಿ ಕುಂದು ಕೊರತೆಗಳನ್ನು ಆಲಿಸಿದ್ದಾರೆ. ಉಸ್ತುವಾರಿ